ಊ) ಈ ಗ್ರಾಮಗಳಲ್ಲಿ ಪದವಿ ಪೂರ್ವ ಕಾಲೇಜುಗಳ ಅವಶ್ಯಕತೆ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ

ಋ) 2007–08ನೇ ಸಾಲಿನ ಆಯವ್ಯಯದಲ್ಲಿನ ಹಣಕಾಸಿನ ಲಭ್ಯತೆ, ಶೈಕ್ಷಣಿಕ ಅಗತ್ಯತೆ ಇತ್ಯಾದಿಗಳನ್ನು ಪರಿಗಣಿಸಿ ಹಂತಹಂತವಾಗಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತಿದೆ ಇದೊಂದು ನಿರಂತರ ಪ್ರಕ್ರಿಯೆಯಾಗಿದೆ

ೠ) ಹೌದು

ಎ) ಖಾಲಿಯಿರುವ ಪ್ರೌಢಶಾಲಾ ಸಹ ಶಿಕ್ಷಕ ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಬಡ್ತಿ ಮೂಲಕ ತುಂಬಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ

1024 (757) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ). ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006–2007ರಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ವಸತಿ ಹೀನರ ಸೌಲಭ್ಯಕ್ಕೆ ನಿರ್ಮಿಸಿರುವ ಒಟ್ಟು ಮನೆಗಳ ಸಂಖ್ಯೆ ಎಷ್ಟು, ನಿವೇಶನ ರಹಿತರಿಗೆ ನಿವೇಶನ ಹಂಚಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತಾಲ್ಲೂಕುವಾರು ಹಂಚಿಕೆಯಾಗಿರುವ ಮನೆಗಳು ಮತ್ತು ನಿವೇಶನಗಳ ಸಂಖ್ಯೆ ಎಷ್ಟು,

ಇ) ಸರ್ಕಾರಿ ಹಾಲಿ ನೀಡುತ್ತಿರುವ ರೂ 20000/– ರಲ್ಲಿ ಮನೆ ಕಟ್ಟಲು ಸಾಧ್ಯವೇ, ಇಲ್ಲವಾದಲ್ಲಿ ಸಹಾಯಧನವನ್ನು ಹೆಚ್ಚಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಗ್ರಾಮೀಣ ಆಶ್ರಯ 2006–2007 ಶ್ರೇಣಿಯಡಿಯಲ್ಲಿ ಒಟ್ಟು 340560 ಗುರಿಯನ್ನು ನೀಡಿದ್ದು, ಗುರಿಗೆ ಅನುಗುಣವಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ

ಇಂದಿರಾ ಆವಾಸ್ 2006–2007 ಶ್ರೇಣಿಯಡಿಯಲ್ಲಿ ಒಟ್ಟು 53299 ಮನೆಗಳ ಗುರಿಯನ್ನು ನೀಡಿದ್ದು, ಇಲ್ಲಿಯವರೆಗೆ 1867 ಮನೆಗಳನ್ನು ನಿರ್ಮಿಸಲಾಗಿರುತ್ತದೆ

ಅಲ್ಲದೆ 2006–07ನೇ ಸಾಲಿನಲ್ಲಿ ಹಿಂದಿನ ಶ್ರೇಣಿಯಡಿಯಲ್ಲಿ ಬಾಕಿ ಇರುವ ಮನೆಗಳಲ್ಲಿ ಒಟ್ಟು 105486 ಮನೆಗಳನ್ನು ನಿರ್ಮಿಸಲಾಗಿರುತ್ತದೆ ಅವುಗಳ ಯೋಜನಾವಾರು ವಿವರ ಈ ಕೆಳಗಿನಂತೆ ನೀಡಲಾಗಿದೆ

ಕ್ರಮ ಸಂಖೆ	ಯೋಜನೆ	ನಿರ್ಮಿಸಲಾಗಿರುವ ಮನೆಗಳು
1	ಗ್ರಾಮೀಣ ಆಶ್ರಯ	65522
2	ಗ್ರಾಮೀಣ ಅಂಬೇಡ್ಕರ್	4022
3	ನಗರ ಆಶ್ರಯ	4862
4	ಇಂದಿರಾ ಆವಾಸ್	30510
5	ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ	553
6	ನಗರ ಅಂಬೇಡ್ಕರ್	17
	ಒಟ್ಟು	**105496**

ಗ್ರಾಮೀಣ ಅಂಬೇಡ್ಕರ್ ಮತ್ತು ನಗರ ಆಶ್ರಯ 2006–07 ಸಾಲಿನಲ್ಲಿ ಗುರಿ ನಿಗದಿಪಡಿಸಿರುವುದಿಲ್ಲ

ನಿವೇಶನ ರಹಿತರಿಗೆ ನಿವೇಶನ ಹಂಚಲು 2006–2007ನೇ ಸಾಲಿನಲ್ಲಿ ಈ ಕೆಳಗಿನಂತೆ ಗುರಿಯನ್ನು ನಿಗದಿಪಡಿಸಲಾಗಿದೆ

ಕ್ರಮ ಸಂಖೆ	ಯೋಜನೆ	ಗುರಿ
1	ನಗರ ನಿವೇಶನ	4884
2	ಗ್ರಾಮೀಣ ನಿವೇಶನ	4884

ಆ) 2006–2007ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ 13740 ಮತ್ತು ಇಂದಿರಾ ಆವಾಸ್

ಯೋಜನೆಯಡಿಯಲ್ಲಿ 1637 ಮನೆಗಳ ಗುರಿ ನಿಗದಿಪಡಿಸಲಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ನೀಡಲಾದ ಗುರಿ	
		ಗ್ರಾಮೀಣ ಆಶ್ರಯ	ಇಂದಿರಾ ಆವಾಸ್
1	ನೆಲಮಂಗಲ	1320	220
2	ಮಾಗಡಿ	1920	215
3	ಹೊಸಕೋಟೆ	1560	214
4	ದೊಡ್ಡಬಳ್ಳಾಪುರ	1740	213
5	ಚನ್ನಪಟ್ಟಣ	1920	131
6	ಕನಕಪುರ	2580	184
7	ರಾಮನಗರ	1440	163
8	ದೇವನಹಳ್ಳಿ	1260	297
	ಒಟ್ಟು	**13740**	**1537**

ನಿವೇಶನ ಯೋಜನೆಯಡಿ ಜಿಲ್ಲಾವಾರು ಗುರಿ ಹೊಂದಲಾಗಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 181 ನಿವೇಶನಗಳ ಗುರಿ ಹೊಂದಲಾಗಿದೆ

, ಇ) ಸರ್ಕಾರ ಹಾಲಿ ನೀಡುತ್ತಿರುವ ರೂ 20000/– ದಲ್ಲಿ ಮನೆ ಕಟ್ಟಲು ಸಾಧ್ಯವಿಲ್ಲ ಆದ್ದರಿಂದ ಸಹಾಯಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

2005–2006ನೇ ಶ್ರೇಣಿಯಡಿ ಘಟಕ ವೆಚ್ಚ ಪ್ರತಿ ಮನೆಗೆ ರೂ 20000/– ದಿಂದ ರೂ 25000/–ಕ್ಕೆ ಮತ್ತು 2006–2007ನೇ ಶ್ರೇಣಿಗೆ ರೂ 30000/–ಕ್ಕೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರೀಶೀಲನೆಯಲ್ಲಿದೆ

1025 (1233) ಶ್ರೀ ನರಸಿಂಹಸ್ವಾಮಿ ಜಿ (ದೊಡ್ಡಬಳ್ಳಾಪುರ). ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಯಾವ ಭಾಗದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಜಮೀನನ್ನು ಭೂ–ಸ್ವಾಧೀನ ಮಾಡಿಕೊಳ್ಳಲಾಗಿರುತ್ತದೆ